ಮೈಸೂರು ಡಿಸ್ಟ್ರಿಕ್ಟ್.

ತಾರೀಖು 17ನೇ ಏಪ್ರಿಲ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರುಮಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ಮಾಡಿದವನೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನಾಗಲಿ ಈ ನೋಟೀಸ್ ತಾರೀಖು ಲಾಗಾಯುತು ಎಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಅನುಸರಿಸಿ ಅದು ನಾಶ ಪಡಿಸಲ್ಪಡುವದು.

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರೇಷನ್ ಮಾಡಿಸಿದ ತಾರೀಖು.	ರಿಜಿಸ್ಟರ್ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
741 ——— 81—82ನೇ ಇಸವಿ	ಮೈಸೂರನಲ್ಲಿ ಇರುವ ಸ್ಮಾರ್ತ ಬ್ರಾಹ್ಮಣ ಮುದುಗಂದೂರು ಕಪನಯ್ಯನವರ ಮೊಮ್ಮಗ ಅರಮನೆ ನೌಕರೀಯಿಂದ ಜೀವಿಸುವ ವೆಂಕಟಭಟ್ಟ.	ತಲಕಾಡು ತಾಲ್ಲೂಕು ಜೋಡಿ ಬೊಮ್ಮನಾಯಕನಹಳ್ಳಿಯಲ್ಲಿ ಇರುವ ಕುರುಬ ಕೊಂಡಂಗಿ ಮಾದೇಗೌಡನ ಮಗ ಕೂಲಿ ಜೀವನದ ಬಸವೇಗೌಡ.	18—3—82	18—3—82	(300) ರೂಪಾಯಿನ ಭೂಸ್ಥಿತಿ ಆಧಾರ ಪತ್ರ.

ಅಬ್ದುಲ್ ಖಾದರ್, ಕೆ. ಬಿ., ರಿಜಿಸ್ಟ್ರಾರ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ತಾರೀಖು 21ನೇ ಏಪ್ರಿಲ್ 1884ನೇ ಇಸವಿ.

ನಗರದಲ್ಲಿ ಯಿರುವ ನೀಲಕೆಂಠೇಶ್ವರ ದೇವಸ್ಥಾನ 1, ಸೊರಬ ತಾಲ್ಲೂಕು ಜಂಬಗುತ್ತಿ ರೇಣಕಾಮ್ಮನವರ ದೇವಸ್ಥಾನ 1, ಈ 2 ದೇವಸ್ಥಾನಗಳ ಬಾಬತು ಭಂಗಾರ ಬೆಳ್ಳಿ, ವಗೈರೆ ಬಾಬತು ನಗಗಳು, ಹಿತ್ತಾಳಿ, ತಾಂಬ್ರ, ಕಂಚು, ಖಬ್ಬಣ ಇವುಗಳ ಬಾಬತು ಪಾತ್ರೆ ಸಾಮಾನುಗಳು ಜವಳಿ ಬಟ್ಟೆಗಳು ಯಿವಗಳನ್ನೆಲ್ಲಾ ಸ್ಯ ಮಜಕೂರ್ ಮೇ ತಾರೀಖು 27ನೇ ಮಂಗಳವಾರ ಹಗಲು 12 ಘಂಟೆ ಸಮಯದಲ್ಲಿ ಶಿವಮೊಗ್ಗೆಯಲ್ಲಿ ಡಿಸ್ಟ್ರಿಕ್ಟ್ ಟ್ರೆಜರೀ ಆಫೀಸಿನಲ್ಲಿ ಪೋಟೊ ಪೋಟಿಯಿಂದ ಹರಾಜು ಹಾಕಿಸುತ್ತಾದ ವ್ಯಯುಕ್ತ ಚಡ ದರಖಾಸ್ತಿನಿಂದ ಮೊಬಲಗು ಕೂಡ್ಲೇ ಹಾಜರ್ ಮಾಡಿ ಮಾಲ್ ಪಡಿಯುವದಕ್ಕೆ ಇಷ್ಟ ಉಳ್ಳಂಥಾ ಸಮಸ್ತ ಜನರೂ ಸದರೀ ಸವಯಕ್ಕೆ ಡಿಸ್ಟ್ರಿಕ್ಟ್ ಆಫೀಸ್ ಬಳಿ ಹಾಜರ್ ಯಿರಬೇಕು.

ಆಕ್ಶೈರ್ ದರಖಾಸ್ತುದಾರರು ಆ ಬಾಬತು ಮೊಬಲಗು ಹಾಜರ್ ಮಾಡುವದಕ್ಕೆ ತಪ್ಪಿದರೆ ಅಂಥಾ ಮಾಲ್‌ಗಳನ್ನು ಪುನಹ ಹರಾಜು ಮಾಡಿಸಿ ಕಮ್ಮಿ ಆಗುವ ಮೊಬಲಗು ಸುಳು ದರಖಾಸ್ತುದಾರನಿಂದ ವಸೂಲ್ ಮಾಡುವದರಲ್ಲಿ ಬರುತ್ತೆ.

ಪಿ. ಪಂಚನಾಥರಾವ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಕಡೂರು ಡಿಸ್ಟ್ರಿಕ್ಟ್ ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ದಿವಾನೀಯಾದ ಡಿಕ್ರಿ ದೇಶೀದಾರ ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಮಲ್ಲಾಪುರ ಮಜರೆಲ್ಲಿ ಇರುವ ನಿವಾಚಾರದ ಪುಲ್ಲಕಾರ್ಜುನ ಪಡೆಯರ ಜಡ್ಜ್‌ಮೆಂಟ್-ಡೆಟರ್ ವಿಷಯದಲ್ಲಿ—